# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 740/2024**

ಫಿರ್ಯಾದುದಾರರುಃ ಸರ್ಕಾರದ ಪರ ಮೈಸೂರು ಜಿಲ್ಲೆ ಮಹಿಳಾ ಪೊಲೀಸ್ ಠಾಣೆ.

ವಿರುದ್ಧ

ಆರೋಪಿತರುಃ

1. ಪ್ರತಾಪ್ ಬಿ ವಿ
ಬಿನ್ ಲೇಟ್ ವಿಷಕಂಠ,
ವಯಸ್ಸು 33 ವರ್ಷ.

2. ಲಕ್ಷ್ಮಮ್ಮ ಕೋಂ ಲೇಟ್ ವಿಷಕಂಠ,
ವಯಸ್ಸು 50 ವರ್ಷ.

3. ಪುನೀತ್ ಬಿ ವಿ ಬಿನ್ ಲೇಟ್ ವಿಷಕಂಠ,
ವಯಸ್ಸು 28 ವರ್ಷ.

4. ಮಹೇಶ್ ಬಿನ್ ವೆಂಕಟೇಶ್,
ವಯಸ್ಸು 40 ವರ್ಷ.

5. ವೆಂಕಟೇಶ್ ಬಿನ್ ಲೇಟ್ ಮರಿಯಯ್ಯ,
ವಯಸ್ಸು 62 ವರ್ಷ,
ಎಲ್ಲರ ವಾಸಃ ಬೀಜಗನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀಮತಿ. ಜೈಬುನ್ನಿಸಾ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ**

ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹುಣಸೂರು ತಾಲ್ಲೂಕು ಬೀಜಗನಹಳ್ಳಿ ಗ್ರಾಮದ1ನೇ ಆರೋಪಿಯಾದ ನೀವು ಸಾಕ್ಷಿ-1 ರವರನ್ನು ಪ್ರೀತಿಸಿ ದಿನಾಂಕ 21.11.2012 ರಂದು ಹುಣಸೂರಿನ ಮಂಜುನಾಥ ದೇವಸ್ಥಾನದಲ್ಲಿ ಸರಳವಾಗಿ

ಮದುವೆಯಾಗಿದ್ದು, ಮದುವೆಯಾಗಿ 6 ವರ್ಷಗಳ ಕಾಲ ಸಾಕ್ಷಿ-1ರವನ್ನು ಚೆನ್ನಾಗಿ ನೋಡಿಕೊಂಡಿದ್ದು, ನಂತರದ ದಿನಗಳಲ್ಲಿ 1 ರಿಂದ 5ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-1ರವರ ಮೇಲೆ ವಿನಾ ಕಾರಣ ಜಗಳ ತೆಗೆದು ನೀನು ಪ್ರೀತಿಸಿ ಮದುವೆಯಾಗಿದ್ದೀಯಾ, ವರದಕ್ಷಿಣೆ ತಂದಿಲ್ಲ ಗತಿ ಇಲ್ಲದವಳು ಎಂದು ಚುಚ್ಚು ಮಾತುಗಳನ್ನಾಡಿ ಕಿರುಕುಳ ನೀಡಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1ನೇ ಆರೋಪಿಯಾದ ನೀವು ಬೇರೆ ಹೆಂಗಸಿನ ಜೊತೆ ಅನೈತಿಕ ಸಂಬಂಧ ಹೊಂದಿದ್ದು, ಈ ವಿಚಾರವನ್ನು ಪ್ರಶ್ನಿಸಿದ ಸಾಕ್ಷಿ-1ರವರ ಮೇಲೆ ಜಗಳ ತೆಗೆದು ಕೈಗಳಿಂದ ಹಲ್ಲೆ ಮಾಡಿದ್ದು, ದಿಃ 30.08.2022 ರಂದು ಸಾಕ್ಷಿ-1ರವರು ಮನೆಯಲ್ಲಿದ್ದಾಗ 1 ರಿಂದ 5ನೇ ಆರೋಪಿಗಳು ಸಮಾನ ಉದ್ದೇಶದಿಂದ ಜಗಳ ತೆಗೆದು ಗಲಾಟೆ ಮಾಡಿ ಕೈಗಳಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ಸಾಕ್ಷಿ-1ರವರು ಅವರ ತಂದೆ ಮನೆಯಲ್ಲಿದ್ದಾಗ 1ನೇ ಆರೋಪಿಯಾದ ನೀವು ಬಂದು ಗಲಾಟೆ ಮಾಡಿ ಬೇವರ್ಸಿ, ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ನಂತರ ನವೆಂಬರ್ 2023 ರಂದು 1 ರಿಂದ 5ನೇ ಆರೋಪಿಗಳು ಸಮಾನ ಉದ್ದೇಶದಿಂದ ಸಾಕ್ಷಿ-1ರವರ ಮೇಲೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ಸಾಕ್ಷಿ-1ರವರು ತಂದೆ ಮನೆಯಲ್ಲಿದ್ದಾಗ 1 ರಿಂದ 5ನೇ ಆರೋಪಿಗಳು ಸಮಾನ ಉದ್ದೇಶದಿಂದ ಸಾಕ್ಷಿ-1ರವರ ಮೇಲೆ ಗಲಾಟೆ ಮಾಡಿ, ಕೊಲೆ ಬೆದರಿಕೆ ಹಾಕಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿತರು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ಜೈಬುನ್ನಿಸಾ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.